**C.C.No.**1787/2022 **PW-**1

<u>ಸಾಕ್ಷಿಗೆ ದಿನಾಂಕಃ **18-07-2025 ರಂದು** ಪ್ರಮಾಣ ವಚನ ಬೋಧಿಸಲಾಯಿತು</u>

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು ಹುಟ್ಟಿದಾಗಿನಿಂದಲೂ ಗೋಕಾಕಿನಲ್ಲಿ ವಾಸವಿರುತ್ತೇನೆ. ನಾನು ಲಾಜಿಸ್ಟಿಕ್ ವ್ಯವಹಾರವನ್ನು 2015 ರಿಂದ ಮತ್ತು ರೆಸ್ಟೋರೆಂಟ್ ವ್ಯವಹಾರವನ್ನು 1985 ರಿಂದ ಮಾಡುತ್ತಿದ್ದೇನೆ. ಆರೋಪಿಯು ಕೊಪ್ಪಳ ಜಿಲ್ಲೆಯ ಗಿನಿಗೇರ ಊರಿನವರಾಗಿರುತ್ತಾರೆ. ಆರೋಪಿಯು ಕಲ್ಯಾಣಿ ಸ್ಟೀಲ್ಸ್ ನಲ್ಲಿ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ನನಗೆ ಆರೋಪಿಯು ಸ್ಲ್ಯಾಗ್ ಮಟೆರಿಯಲ್ ಗಳನ್ನು ಮಾರಾಟ ಮಾಡುತ್ತಿದ್ದರು, ನಾನು ಅವುಗಳ ಖರೀದಿದಾರನಾಗಿದ್ದ ಕಾರಣ ನನಗೆ ಅವರಿಗೆ ಪರಿಚಯ ಅಗಿರುತ್ತದೆ. ಸದರಿ ಮಟೆರಿಯಲ್ ಗಳನ್ನು ನಮ್ಮ ಲಾಜಿಸ್ಟಿಕ್ ನಿಂದ ರವಾನೆ ಮಾಡುತ್ತಿದ್ದ ಕಾರಣ ಅವರ ಪರಿಚಯ ಆಗಿರುತ್ತದೆ. ನಾನು ನನ್ನ ವ್ಯವಹಾರವನ್ನು ಗೋಕಾಕಿನಲ್ಲಿ ಹೊಂದಿರುತ್ತೇನೆ. ನಾನು ನನ್ನ ಲಾಜಿಸ್ಟಿಕ್ ವ್ಯವಹಾರವನ್ನು ಕೊಪ್ಪಳದಲ್ಲಿಯೂ ಸಹ ಮಾಡುವ ಕಾರಣ ಆರೋಪಿ ನನ್ನ ಸಂಪರ್ಕಕ್ಕೆ ಬಂದಿರುತ್ತಾರೆ.

ನನ್ನ ಲಾಜಿಸ್ಟಿಕ್ ವ್ಯವಹಾರವು ನನ್ನ ಪತ್ನಿಯ ಹೆಸರಿನಲ್ಲಿದ್ದೂ, ಅದರ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ಸಾಕ್ಷಿಗೆ ಸದರಿ ವ್ಯವಹಾರವನ್ನು ಅವರ ಪತ್ನಿಯ ಹೆಸರಿನಲ್ಲಿ ಇರುವ ಕಾರಣ, ಪ್ರಸ್ತುತ ಪ್ರಕರಣದ ವ್ಯವಹಾರವು ಸಾಕ್ಷಿಯ ಪತ್ನಿ ಹಾಗೂ ಆರೋಪಿಯ ನಡುವೆ ಆಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿ ಸದರಿ ವ್ಯವಹಾರವು ಅವರ ಪತ್ನಿಯ ಹೆಸರಿನಲ್ಲಿದ್ದರೂ ಸಹ ತಾವೇ ನೋಡಿಕೊಳ್ಳುತ್ತಿದ್ದರಿಂದ ತಾವೇ ವ್ಯವಹಾರ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ವ್ಯವಹಾರದ ಕೊಟ್ಟು ತೆಗೆದು ಕೊಳ್ಳುವ ವ್ಯವಹಾರವನ್ನು ನನ್ನ ಪತ್ನಿ ಹಾಗೂ ಆರೋಪಿ ಮಾಡಿರುವುದರಿಂದ ನನಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿ.

ನನಗೆ ಇಬ್ಬರು ಮಕ್ಕಳಿದ್ದು, ನನ್ನ ಮಗನ ಹೆಸರು ರಾಹುಲ ಎಂದು ಇದ್ದು, ಆತ 2018 ರಿಂದ ಉದ್ಯೋಗ ಮಾಡುತ್ತಿರುತ್ತಾನೆ. 2020-21 ನೇ ಸಾಲಿನಲ್ಲಿ ಕರೋನಾ ಸಮಯದಲ್ಲಿ ನನ್ನ ಮಗ ಗೋಕಾಕಿನಲ್ಲಿ ಇದ್ದ ಎಂದರೆ ಸರಿ.

ಆರೋಪಿಯು ಕಲ್ಯಾಣಿ ಸ್ಟೀಲ್ಸ್ ನಲ್ಲಿ ಲೇಬರ್ ಕಾಂಟ್ರಾಕ್ಟರ್ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ನನ್ನ ಮಗ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಹಾಗೂ ನನ್ನ ಮಗ ಸದರಿ ವ್ಯವಹಾರದಲ್ಲಿ ಲಾಭ ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು ಎಂದರೆ ಸರಿ. ಪ್ರಸ್ತುತ ಆರೋಪಿ ಹಾಗೂ ನನ್ನ ಮಗನ ನಡುವೆ ವ್ಯವಹಾರ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಮಗನ ಜೊತೆಯ ವ್ಯವಹಾರಕ್ಕೆ ಸಂಬಂದಿಸಿದಂತೆ ಅವನಿಗೆ ಖಾಲಿ ಚೆಕ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನಾನು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನ ಮಗನಿಗೆ 5,37,000/- ರೂಪಾಯಿಯ ಚೆಕ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 1,50,000/- ರೂಪಾಯಿ ನಗದನ್ನು , ಅದೇ ರೀತಿ 75,000/- ರೂ ಗಳನ್ನು ಫೋನ್ ಪೇ ಮುಖಾಂತರ ನನ್ನ ಮಗನಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರವಾಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವ್ಯವಹಾರವಾಗಿರದಿದ್ದರೂ, ನನ್ನ ಮಗನಿಗೆ ನೀಡಿದ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ ಕೊಡುವ ಅವಶ್ಯಕತೆ ಇರಲಿಲ್ಲ, ಅವರು ನನಗೆ ಯಾವುದೇ ಹಣ ನೀಡುವ ಬಾಧ್ಯತೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

**C.C.No.**1787/2022 **PW**-1

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.